# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಉತ್ತರ ಪ್ರದೇಶದ ಪ್ರಯಾಗರಾಜದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾಲ್ಕು ದಿನಗಳ ಕಾಲ ನಡೆದ ಅಖಿಲ ಭಾರತೀಯ ಕಾರ್ಯಾಕಾರಿಣಿ ಮಂಡಳಿ ಸಭೆಯ ಸಮಾರೋಪದಲ್ಲಿ ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆಯವರು ಪತ್ರಿಕಾ ಗೋಷ್ಠಿ ನಡೆಸಿದರು.


ಸಂಪುಟ : 44 ಸಂಚಿಕೆ : 14 ಕಾರ್ತಿಕ – ಮಾರ್ಗಶಿರ ಕಲಿಯುಗಾಬ್ದ 5124 01–11–2022 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಜಯ ಭಾರತಜನನಿಯ ತನುಜಾತೆ ಜಯ ಹೇ ಕರ್ನಾಟಕಮಾತೆ!

ನವೆಂಬರ್ ಬಂತೆಂದರೆ ರಾಜ್ಯದೆಲ್ಲೆಡೆ ರಾಜ್ಯೋತ್ಸವದ ಸಂಭ್ರಮ. ನಮ್ಮ ಕರ್ನಾಟಕದ ಭಾಷೆ, ಸಂಸ್ಕೃತಿ, ಇತಿಹಾಸಗಳನ್ನು ನೆನಪು ಮಾಡಿಕೊಳ್ಳುವ, ಅದರ ಬಗ್ಗೆ ಹೆಮ್ಮೆಪಡುವ ಸುಸಂದರ್ಭ ಇದು. ಭಾಷೆ, ಸಂಸ್ಕೃತಿ, ಸಂಪ್ರದಾಯಗಳ ವಿಚಾರದಲ್ಲಿ ನಮ್ಮ ದೇಶದಲ್ಲಿರುವಷ್ಟು ವೈವಿಧ್ಯ ಪ್ರಪಂಚದ ಬೇರಾವ ದೇಶದಲ್ಲೂ ಇರಲಾರದು. ಆ ವಿಷಯದಲ್ಲಿ ಕರ್ನಾಟಕವೂ ಕಡಿಮೆಯೇನಲ್ಲ. ಭೌಗೋಳಿಕವಾಗಿ ಕರಾವಳಿ, ಮಲೆನಾಡು, ಬಯಲುಸೀಮೆ ಎಲ್ಲವೂ ಇಲ್ಲಿವೆ. ಕನ್ನಡದಲ್ಲೇ ಅದೆಷ್ಟೋ ಉಪಭಾಷೆಗಳು. ಅಲ್ಲದೇ, ಕೊಡವ, ತುಳು, ಕೊಂಕಣಿ, ಲಂಬಾಣಿ, ಬ್ಯಾರಿ ಮೊದಲಾದ ಹಲವಾರು ಭಾಷೆಗಳು ಇಲ್ಲಿವೆ. ಹಬ್ಬಹರಿದಿನಗಳು, ಸಂಪ್ರದಾಯಗಳ ವಿಷಯದಲ್ಲೂ ನಮ್ಮದು ವೈವಿಧ್ಯಮಯ ಸಮಾಜ. ಯಕ್ಷಗಾನ, ಭರತನಾಟ್ಯ, ದೊಡ್ಡಾಟ, ವೀರಗಾಸೆ, ಡೊಳ್ಳುಕುಣಿತ, ಕಂಸಾಳೆ. ಒಂದೇ, ಎರಡೇ? ಎಷ್ಟೋ ಕಲಾಪ್ರಕಾರಗಳು. ಇಷ್ಟೆಲ್ಲ ವೈವಿಧ್ಯವಿದ್ದರೂ ಅದು ಎಂದೂ ನಮ್ಮನ್ನು ಒಡೆಯಲಿಲ್ಲ. ಬದಲಿಗೆ, ಅವುಗಳ ನಡುವೆ ಪರಸ್ಪರ ಪ್ರೀತಿಯಿದೆ, ಕೊಡುಕೊಳ್ಳುವ ವ್ಯವಹಾರವಿದೆ. ಇದು ಕನ್ನಡನಾಡಿನ ಸಂಸ್ಕೃತಿ. ಹಾಗೆ ನೋಡಿದರೆ, ಭಾರತ ಇರುವುದೇ ಹಾಗಲ್ಲವೇ? ನಮ್ಮಲ್ಲಿನ ವೈವಿಧ್ಯ ನಮಗೊಂದು ಸಮಸ್ಯೆಯಾಗಿ ಕಾಡಲೇ ಇಲ್ಲ. ಪ್ರಕೃತಿಯಲ್ಲಿ ವಿವಿಧತೆಯಿದ್ದರೂ ಗಿಡಮರ, ಪ್ರಾಣಿಪಕ್ಷಿಗಳು ಒಂದಕ್ಕೊಂದು ಪೂರಕವಾಗಿದ್ದು ಹೊಂದಿಕೊಂಡು ಬಾಳುವಂತೆ, ಭಾರತೀಯರೂ ವಿವಿಧತೆಯನ್ನು ಉಳಿಸಿಕೊಂಡೇ ಒಂದು ಸಮಾಜವಾಗಿ ಒಂದಾಗಿ ಸಾವಿರಾರು ವರ್ಷಗಳಿಂದ ಬಾಳಿ ಬದುಕಿದ್ದಾರೆ. ವಿವಿಧತೆಯನ್ನು ಉಳಿಸಿಕೊಂಡಿದ್ದರಿಂದಲೇ, ಯಾರ ಮೇಲೂ ಯಾವುದನ್ನೂ ಹೇರದಿದ್ದುದರಿಂದಲೇ ಅತ್ಯಂತ ಪ್ರಾಚೀನ ಕಾಲದಿಂದಲೂ ಭಾರತೀಯ ಸಮಾಜ ಬಾಳಿ



ಬದುಕಲು ಸಾಧ್ಯವಾಗಿದೆ.

ಇಂತಹ ಭಾರತಮಾತೆಯ ಮಗಳು ಕರ್ನಾಟಕಮಾತೆ ಎಂದು ನಮ್ಮ ಹೆಮ್ಮೆಯ ರಾಷ್ಟ್ರಕವಿ ಕುವೆಂಪು ಅವರು ನಾಡಗೀತೆಯಾದ 'ಜಯ ಭಾರತಜನನಿಯ ತನುಜಾತೆ ಜಯ ಹೇ ಕರ್ನಾಟಕಮಾತೆ' ಹಾಡಿನಲ್ಲಿ ಕೊಂಡಾಡಿದ್ದಾರೆ. ರಾಷ್ಟ್ರಕಾರ್ಯಕ್ಕೆ ತಮ್ಮ ಜೀವನವನ್ನು ಸಮರ್ಪಿಸಿದ ಅನೇಕ ಮಹನೀಯರನ್ನು ನಾಡಗೀತೆಯಲ್ಲಿ ಸ್ಮರಿಸಿದ್ದಾರೆ ಕುವೆಂಪು ಅವರು. ಕದಂಬ, ಚಾಲುಕ್ಯ, ಗಂಗ, ರಾಷ್ಟ್ರಕೂಟ, ಹೊಯ್ಸಳ ಸಾಮ್ರಾಜ್ಯಗಳ ನಾಡು ಇದು. ಇಡೀ ದೇಶದೆಲ್ಲೆಡೆ ಆಕ್ರಮಣಕಾರಿ ಮುಸ್ಲಿಂ ರಾಜರದ್ದೇ ಆಡಳಿತವಿದ್ದಾಗ, ಹಿಂದುಸಮಾಜಕ್ಕೆ ಶಕ್ತಿ–ವಿಶ್ವಾಸ ತುಂಬಿದ್ದು ನಮ್ಮ ಹೆಮ್ಮೆಯ ವಿಜಯನಗರ ಸಾಮ್ರಾಜ್ಯ. ಬಳಿಕ ಅದೇ ಪರಂಪರೆಯನ್ನು ಮೈಸೂರಿನ ಅರಸರು ಮುಂದುವರೆಸಿದರು. ಪೋರ್ಚುಗೀಸರನ್ನು ದಿಟ್ಟತನದಿಂದ ಎದುರಿಸಿದ ವೀರರಾಣಿ ಅಬ್ಬಕ್ಕ, ಬ್ರಿಟಿಷರ ವಿರುದ್ಧ ತೊಡೆತಟ್ಟಿ ನಿಂತ ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ನರಗುಂದದ ಬಾಬಾಸಾಹೇಬ, ಧೂರ್ತ ಹೈದರಾಲಿಯ ಸಂಚನ್ನು ವಿಫಲಗೊಳಿಸಿದ ಒನಕೆ ಓಬವ್ವ, ಮೊದಲಾದವರ ಕಥೆಯನ್ನು ಕೇಳಿದವನ ಹೃದಯದಲ್ಲಿ ದೇಶಕ್ಕಾಗಿ ಹೋರಾಡುವ ಕಿಚ್ಚು ಉದಿಸದಿರದು. ಸ್ವಾತಂತ್ರ್ಯ ಹೋರಾಟದಲ್ಲಂತೂ ಕರ್ನಾಟಕದ ಹಳ್ಳಿ ಹಳ್ಳಿಯ ಜನರ ಯೋಗದಾನವಿತ್ತೆಂದರೆ ತಪ್ಪಲ್ಲ. ಇದೆಲ್ಲವೂ ನಮ್ಮ ನಾಡಿನ ಹಿರಿಮೆ. ಅಂತಹ ರಾಷ್ಟ್ರಾಭಿಮಾನವುಳ್ಳ ಸಮಾಜ ನಮ್ಮದು.

ಇತಿಹಾಸದ ಮೆಲುಕು ಹಾಕುವುದರಿಂದ ನಮ್ಮ ಬಗ್ಗೆ ನಮಗೇ ಹೆಮ್ಮೆ, ವಿಶ್ವಾಸ ಮೂಡುತ್ತದೆಯೆಂಬುದೇನೋ ನಿಜ. ಆದರೆ, ಅಷ್ಟೇ ಮಾಡುತ್ತಾ ಕುಳಿತರೆ ಸಾಲದಷ್ಟೇ. ಇಂದು ನಮ್ಮ ನಾಡಿಗೆ ನಮ್ಮ ಕೊಡುಗೆ ಏನು? ನಮ್ಮ ಭಾಷೆ ಸಂಸ್ಕೃತಿಯ ಉಳಿವಿಗೆ ನಮ್ಮ ಪ್ರಯತ್ನ ಏನಿದೆ ಎನ್ನುವುದರ ಬಗ್ಗೆಯೂ ಈ ರಾಜ್ಯೋತ್ಸವದ ಸಂದರ್ಭದಲ್ಲಿ ಸ್ವಲ್ಪ ಗಮನ ಹರಿಸುವುದು ಉಚಿತವೆನಿಸುತ್ತದೆ.

## ಭಾಷೆಯನ್ನು ಬಳಸಿದರೆ, ತಾನಾಗಿಯೇ ಉಳಿಯುತ್ತದೆ!

ಆಂಗ್ಲ ಭಾಷೆಯ ವ್ಯಾಮೋಹದಿಂದಾಗಿ ಕನ್ನಡ ಮಾಧ್ಯಮ ಶಾಲೆಗಳಿಗೆ ಬರುವ ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಮುಂದಿನ ಕೆಲವು ವರ್ಷಗಳಲ್ಲಿ ಕನ್ನಡ ಮಾತನಾಡುವ ಜನರ ಸಂಖ್ಯೆ ತೀವ್ರವಾಗಿ ಕಡಿಮೆಯಾಗಲಿದೆ ಎಂಬ ಭೀತಿ ಇಂದು ಕಾಡುತ್ತಿದೆ. ಹಳ್ಳಿಹಳ್ಳಿಯಲ್ಲೂ ಇಂಗ್ಲಿಷ್ ಮಾಧ್ಯಮದ ಶಾಲೆಗಳು ತಲೆಯೆತ್ತಿವೆ. ಕನ್ನಡ ಮಾತನಾಡಲು ಬರುತ್ತೆ, ಓದಲಿಕ್ಕೆ ಕಷ್ಟ ಎನ್ನುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಹೀಗೇ ಆದರೆ, ಕನ್ನಡ ಓದುವವರು ಬರೆಯುವವರು ಯಾರು? ಓದು ಬರಹ ಇಲ್ಲದೇ ಒಂದು ಭಾಷೆ ಉಳಿಯಲು ಹೇಗೆ ಸಾಧ್ಯ? ನಾವೆಲ್ಲ ಗಂಭೀರವಾಗಿ ಚಿಂತಿಸಬೇಕಾದ ವಿಷಯ ಇದು. ನಮ್ಮ ಭಾಷೆಯನ್ನು ಉಳಿಸಬೇಕಾದರೆ, ಹೋರಾಟ ಮಾಡಬೇಕಾದ ಅಗತ್ಯವಿಲ್ಲ. ನಮ್ಮ ಭಾಷೆಗೆ ಹೊರಗಿನ ಯಾರೋ ವೈರಿಗಳಲ್ಲ. ಅದನ್ನು ಬಳಸದಿರುವ ನಾವೇ ಅದರ ವೈರಿಗಳು. ಭಾಷೆಯನ್ನು ನಾವು ಬಳಸಿದರೆ ಸಾಕು, ಭಾಷೆ ಉಳಿಯುತ್ತದೆ. ನಮ್ಮ ಮನೆಗೆ ಕನ್ನಡ ದಿನಪತ್ರಿಕೆ ಬರಬೇಕು, ನಮ್ಮ ಮನೆಯಲ್ಲಿ ಕನ್ನಡ ಪುಸ್ತಕಗಳಿರಬೇಕು. ಇಂಗ್ಲಿಷ್ ಶಬ್ದಗಳನ್ನು ಮಧ್ಯೆ ಮಧ್ಯೆ ತುರುಕಿ ಮಾತನಾಡುವುದನ್ನು ಬಿಟ್ಟು, ಕನ್ನಡ ಶಬ್ದಗಳನ್ನೇ ಬಳಸುವುದನ್ನು ಅಭ್ಯಾಸ ಮಾಡಬೇಕು. ಮೊಬೈಲಿನಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡದಲ್ಲೇ ಬರೆಯಬಹುದಲ್ಲವೇ? ಇನ್ನೂ ಹಲವರು ಅದನ್ನು ಅಭ್ಯಾಸ ಮಾಡಿಕೊಂಡಿಲ್ಲ. ನಮ್ಮಲ್ಲಿ ಹೆಚ್ಚಿನವರು ಸಹಿ ಮಾಡುವುದು ಇಂಗ್ಲಿಷಿನಲ್ಲೇ. ಕನ್ನಡದಲ್ಲಿ ಸಹಿ ಮಾಡಲು ಯಾಕೆ ಪ್ರಾರಂಭಿಸಬಾರದು? ಕನಿಷ್ಠ ಪ್ರಾಥಮಿಕ ಶಿಕ್ಷಣವಾದರೂ ನಮ್ಮ ಭಾಷೆಯಲ್ಲಿರುವ ಶಾಲೆಗಳಿಗೆ ನಮ್ಮ ಮಕ್ಕಳನ್ನು ಕಳುಹಿಸಬಹುದೇ? ನಮ್ಮ ಮಕ್ಕಳಿಗೆ ಅಮೇರಿಕಾ, ಯುರೋಪಿನ ಬಗ್ಗೆ ಗೊತ್ತಿರುವಷ್ಟು ಕರ್ನಾಟಕದ ಬಗ್ಗೆ ಗೊತ್ತಿದೆಯೇ? ಇದನ್ನು ನಾವು ಕಲಿಸುತ್ತಿದ್ದೇವೆಯೇ? ಇವನ್ನೆಲ್ಲ ಬದಲಿಸಿಕೊಳ್ಳಲು ಇಂದೇ ಶುಭಘಳಿಗೆ!

ಭಾಷೆಯೊಂದಿಗೆ ಬೆಸೆದುಕೊಂಡಿರುವುದು ಸಂಸ್ಕೃತಿ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ನಮ್ಮ ಭಾಷೆ ಹಾಗೂ ಸಂಸ್ಕೃತಿ ಉಳಿಯಬೇಕಾದರೆ, ಅದನ್ನು ಪ್ರೀತಿಸುವ, ಬಳಸುವ, ಆಚರಿಸುವ ಜನರಿರಬೇಕಷ್ಟೇ! ಇಂದು ಏನಾಗುತ್ತಿದೆ? ಕನ್ನಡ, ತುಳು, ಕೊಡವ, ಕೊಂಕಣಿ ಮೊದಲಾದ ನಮ್ಮ ಭಾಷೆಗಳನ್ನು ಮಾತನಾಡುವ ಕುಟುಂಬಗಳಲ್ಲಿನ ದಂಪತಿಗಳಿಗೆ ಎಷ್ಟು ಮಕ್ಕಳಿದ್ದಾರೆ? 'ನಾವಿಬ್ಬರು, ನಮಗಿಬ್ಬರು' ಎಂಬ ಕಾಲ ಹೋಗಿ, 'ನಾವಿಬ್ಬರು, ನಮಗೊಬ್ಬರು' ಎಂಬ ಕಾಲ ಬಂದಿದೆ. ಹೀಗೇ ಮುಂದುವರೆದರೆ, ನಮ್ಮ ಕರ್ನಾಟಕದಲ್ಲೇ ನಮ್ಮ ಸಂಸ್ಕೃತಿ ಉಳಿಯಲಿಕ್ಕಿಲ್ಲ. ಕರ್ನಾಟಕಮಾತೆ, ಆ ಭುವನೇಶ್ವರಿಯನ್ನು ಪೂಜಿಸುವವರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ಬದಲಿಗೆ, ಉರ್ದು ಮಾತನಾಡುವವರ ಸಂಖ್ಯೆ, ಇಂಗ್ಲಿಷಿನಲ್ಲೇ ವ್ಯವಹರಿಸುವವರ ಸಂಖ್ಯೆ ಬೆಳೆಯುತ್ತಿದೆ. ಇದರಿಂದ ಕರ್ನಾಟಕದ ಸಂಸ್ಕೃತಿ ಭಾಷೆಗಳು ಹೇಗೆ ಉಳಿಯಲು ಸಾಧ್ಯ? ಇಂತಹ ಜನಸಂಖ್ಯಾ ಅಸಮತೋಲನದ ಬಗ್ಗೆಯೂ ನಾವು



ಯೋಚಿಸಬೇಕಿದೆ. ನಮ್ಮ ಜಮೀನು ಮಾರಿದರೆ, ಕೊಳ್ಳುವವರು ಉರ್ದು ಭಾಷಿಕರು ಅಥವಾ ಮಲಯಾಳೀ ಮುಸ್ಲಿಮರು. ಜಮೀನು ಮಾರಿದವರು ಇಂದು ಬೆಂಗಳೂರಿಗೆ ಹೋಗುವುದು ಸರಿ. ನಾಳೆ ಬೆಂಗಳೂರಿನಲ್ಲಿ ನಮ್ಮವರು ಎನ್ನುವವರೇ ಕಡಿಮೆಯಾದರೆ, ಹೋಗುವುದೆಲ್ಲಿಗೆ?

## ಭಾರತವಿದ್ದರೆ ಕರ್ನಾಟಕ, ಕರ್ನಾಟಕವಿದ್ದರೆ ಭಾರತ

'ಭಾರತೀದೇವಿ ಕರ್ನಾಟಕದೇವಿಯ ಪ್ರತಿಮೆ. ಕರ್ನಾಟಕದೇವಿ ಭಾರತೀದೇವಿಯ ಪ್ರತಿಮೆ. ಭಾರತವಿಲ್ಲದೇ ಕರ್ನಾಟಕವಿಲ್ಲ. ಕರ್ನಾಟಕವಿಲ್ಲದೇ ಭಾರತವಿಲ್ಲ. ಇವೆರಡೂ ಒಂದನ್ನೊಂದು ಬಿಟ್ಟಿರಲಾರವು'. ಎಂದಿದ್ದರು ಕರ್ನಾಟಕದ ಏಕೀಕರಣಕ್ಕಾಗಿ ತಮ್ಮ ಜೀವನವನ್ನೇ ಸವೆಸಿದ ಕನ್ನಡದ ಕುಲಪುರೋಹಿತ ಎಂಬ ಬಿರುದನ್ನು ಪಡೆದ ಆಲೂರು ವೆಂಕಟರಾಯರು. ಕರ್ನಾಟಕದ ಭಾಷೆ–ಸಂಸ್ಕೃತಿಗಳ ಬಗೆಗಿನ ನಮ್ಮ ಅಭಿಮಾನ ಬೇರೆ ರಾಜ್ಯಗಳ ಬಗೆಗೆ ನಮ್ಮಗೆ ದ್ವೇಷವನ್ನು ತರಬಾರದು. ನಾವು ಎಷ್ಟು ಕನ್ನಡಿಗರೋ, ಅಷ್ಟೇ ಭಾರತೀಯರೂ ಕೂಡ. ಹಿಂದಿಯನ್ನೋ, ತಮಿಳನ್ನೋ, ರಾಜಸ್ಥಾನಿಯನ್ನೋ ಮಾತನಾಡುವ ಇನ್ನೊಬ್ಬನಿಗೆ ಅವನ ಭಾಷೆಯ ಬಗ್ಗೆ ಅಭಿಮಾನವಿರುವುದು ಸಹಜವಷ್ಟೇ. ಆ ಭಾಷೆಗಳಿಗೂ ನಮ್ಮ ಭಾಷೆಗಿರುವ ಹಾಗೆಯೇ ಇಂಗ್ಲಿಷ್, ಉರ್ದು, ಅರೇಬಿಕ್ ಭಾಷೆಗಳಿಂದ ಅಪಾಯವಿದೆ. ತಮ್ಮ ತಮ್ಮ ಭಾಷೆಗಳನ್ನು ಬಳಸುವ, ಬೆಳೆಸುವ ಕೆಲಸವನ್ನು ನಮ್ಮಂತೆಯೇ ಅವರೂ ಮಾಡಬೇಕಿದೆ. ನಮ್ಮ ತಾಯಿಯ ಮೇಲೆ ನನಗೆ ಪ್ರೀತಿಯಿರಲಿ. ಅದು ಬೇರೆಯವರ ತಾಯಿಯ ಮೇಲಿನ ದ್ವೇಷಕ್ಕೆ ಯಾಕೆ ಕಾರಣವಾಗದಿರಲಿ. ಈ ಅರಿವು ಸದಾ ಅಗತ್ಯ.

## ಪ್ರಾದೇಶಿಕ ಭಾಷೆಗಳಿಗೆ ಪ್ರೋತ್ಸಾಹ ಕೊಡುತ್ತಿರುವ ಸರ್ಕಾರಗಳು

ರಾಷ್ಟ್ರೀಯ ಶಿಕ್ಷಣ ನೀತಿ (ಎನ್ಇಪಿ) ಯೂ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ಸಿಗಬೇಕು ಎಂಬ ಅಂಶವನ್ನು ಒತ್ತಿ ಹೇಳಿದೆ. ರಾಜ್ಯ ಸರ್ಕಾರವೂ ಕೂಡ ಈ ವರ್ಷ ಭಾಷಾನೀತಿಯನ್ನು ಬಿಡುಗಡೆ ಮಾಡಿದೆ. ಇತ್ತೀಚೆಗೆ ಪ್ರಧಾನಮಂತ್ರಿಯವರು ನ್ಯಾಯಾಲಯಗಳ ವ್ಯವಹಾರಗಳು ಪ್ರಾದೇಶಿಕ ಭಾಷೆಗಳಲ್ಲಿ ನಡೆಯುವಂತಾಗಬೇಕು ಎಂಬ ಆಶಯ ವ್ಯಕ್ತಪಡಿಸಿದ್ದಾರೆ. ಕನ್ನಡವೂ ಸೇರಿದಂತೆ ಹಲವು ಪ್ರಾದೇಶಿಕ ಭಾಷೆಗಳಲ್ಲಿ ಇಂಜಿನಿಯರಿಂಗ್ ಮೊದಲಾದ ವೃತ್ತಿಪರ ಶಿಕ್ಷಣ ಪ್ರಾರಂಭವಾಗಿದೆ. ಕೇಂದ್ರ ಸರ್ಕಾರದ ಕೆಲವು ಸ್ಪರ್ಧಾತ್ಮಕ ಪರೀಕ್ಷೆಗಳು ಪ್ರಾದೇಶಿಕ ಭಾಷೆಗಳಲ್ಲಿ ನಡೆಯುತ್ತಿವೆ. ಇನ್ನೂ ಹಲವು ಪ್ರಾರಂಭವಾಗಲಿವೆ. ಮುಂಬರುವ ದಿನಗಳಲ್ಲಿ ಸರ್ಕಾರದ ಹೆಚ್ಚಿನ ವ್ಯವಹಾರಗಳು ಭಾರತೀಯ ಭಾಷೆಗಳಲ್ಲಿ ಇರಲಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಇವೆಲ್ಲವೂ ಸಂತಸದ ಸಂಗತಿಗಳು.

ನಮ್ಮ ಭಾಷೆ–ಸಂಸ್ಕೃತಿಗಳನ್ನು ಬಳಸಿ, ಉಳಿಸುವುದು ರಾಷ್ಟ್ರಕಾರ್ಯವೇ. ಅದನ್ನು ಯಾರೋ ಹೋರಾಟಗಾರರಿಗೆ ಗುತ್ತಿಗೆ ಕೊಡಲು ಸಾಧ್ಯವಿಲ್ಲ. ಅದು ನಮ್ಮೆಲ್ಲರ ಕೆಲಸ. ಅದು ಇಂದಿನಿಂದಲೇ ಪ್ರಾರಂಭವಾಗಲಿ.

## ಸಂಸ್ಮರಣೆ

# ಕುನ್ವರ್ ಸಿಂಗ್

ಮಂಗಲ್ ಪಾಂಡೆ ಹತ್ತಿಸಿದ ಪ್ರಥಮ ಸ್ವಾತ್ರಂತ್ರ್ಯ ಸಂಗ್ರಾಮದ ಕಿಚ್ಚನ್ನು ಬಿಹಾರ್ ಪ್ರಾಂತ್ಯದಲ್ಲಿ ಪ್ರಜ್ವಲಿಸುವಂತೆ ಮಾಡಿದ ಕೀರ್ತಿ ಪ್ರಸ್ತುತ ಭಾರತದ ಬಿಹಾರದ ಭೋಜ್‌ಪುರ ಜಿಲ್ಲೆಯ ಭಾಗವಾಗಿರುವ ಜಗದೀಶ್‌ಪುರದ ಪರ್ಮಾರ್ ರಜಪೂತರ ಉಜ್ಜೈನಿಯಾ ಕುಲದ ಕುಟುಂಬಕ್ಕೆ ಸೇರಿದ್ದ ವೀರ್ ಕುನ್ವರ್ ಸಿಂಗ್ ಅವರಿಗೆ ಸಲ್ಲುತ್ತದೆ.

ಏಪ್ರಿಲ್ 1777ರಲ್ಲಿ ಪ್ರಸ್ತುತ ಬಿಹಾರದ ಭೋಜ್‌ಪುರ ಜಿಲ್ಲೆಗೆ ಸೇರಿರುವ ಜಗದೀಶ್‌ಪುರದಲ್ಲಿ ಮಹಾರಾಜ ಶಬ್ಜದಾ ಸಿಂಗ್ ಮತ್ತು ರಾಣಿ ಪಂಚ್ರತನ್ ದೇವಿಯವರಿಗೆ ಕುನ್ವರ್ ಸಿಂಗ್ ಜನಿಸುತ್ತಾರೆ. ಅವರ ತಂದೆಯವರೂ ಸಹಾ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿದವರೇ ಆಗಿದ್ದರು. ಕುನ್ವರ್ ಅವರ ಎಲ್ಲಾ ಸಾಹಸಕ್ಕೆ ಅವರ ಸಹೋದರ ಬಾಬು ಅಮರ್ ಸಿಂಗ್ ಮತ್ತು ಅವರ ಸೈನ್ಯಧಿಕಾರಿಯಾಗಿದ್ದ ಕೃಷ್ಣ ಸಿಂಗ್ ಬೆಂಗಾವಲಾಗಿರುತ್ತಾರೆ. ಗೆರಿಲ್ಲಾ ಮಾದರಿಯ ಯುದ್ಧದಲ್ಲಿ ಪರಿಣಿತಿ ಹೊಂದಿದ್ದ ಇವರು ಸಾಯುವವರೆಗೂ ಅಜೇಯರಾಗಿದ್ದು ಅವರ ತಂತ್ರ ಮತ್ತು ಪ್ರತಿತಂತ್ರಗಳು ಬ್ರಿಟಿಷರನ್ನು ಸದಾಕಾಲವೂ ಗೊಂದಲಕ್ಕೀಡು ಮಾಡಿದ್ದವು.


ಶತ್ರುಗಳನ್ನು ಬಗ್ಗು ಬಡಿಯುವ ಮುನ್ನ ಅವರ ಶಕ್ತಿಯನ್ನು ಅರಿಯಲು ಅವರೊಂದಿಗೇ ಸ್ನೇಹ ಬೆಳಸಿ ಅದರ ಪ್ರತಿಫಲವಾಗಿ ಬ್ರಿಟಿಷ್ ಅವರಿಂದಲೇ ಮದ್ದುಗುಂಡು ಕಾರ್ಖಾನೆಯನ್ನೂ ಆರಂಭಿಸಿ ಅಲ್ಲಿ ತಯಾರಾಗುತ್ತಿದ್ದ ಮದ್ದು ಗುಂಡುಗಳನ್ನು ಬ್ರಿಟಿಷರಿಗೆ ಅನುಮಾನವೇ ಬಾರದಂತೆ ಅವರ ವಿರುದ್ಧವೇ ಬಳಸಲು ಸ್ವತಂತ್ರ ಹೋರಾಟಗಾರರಿಗೆ ನೀಡುತ್ತಿರುತ್ತಾರೆ. 1857 ಜುಲೈ 25 ರಂದು ಬ್ರಿಟೀಷರ ವಿರುದ್ಧ ತಮ್ಮದೇ ಸೈನ್ಯದೊಂದಿಗೆ ಹೋರಾಟಿ ಬ್ರಿಟಿಷರನ್ನು ಸೋಲಿಸಿ ಅವರ ಖಜಾನೆಯನ್ನು ವಶಕ್ಕೆ ಪಡೆದುಕೊಳ್ಳುತ್ತಾರೆ. ಕುನ್ವರ್ ಸಿಂಗ್ ವಿರುದ್ಧ ಹೋರಾಡಲು ಮೊದಲು ಕ್ಯಾಪ್ಟನ್ ಡನ್ ಬಾರ್ ಅವರ ನೇತೃತ್ವದಲ್ಲಿ ಸೈನ್ಯ ಬರುತ್ತಿರುವುದನ್ನು ತಿಳಿದ ಕುನ್ವರ್ ಅವರ ತಂಡ ಗಾಂಗೀ ಎಂಬಲ್ಲಿ ಡನಬಾರ್‌ನ ಸಮೇತ ಇಡೀ ಬ್ರಿಟಿಷ್ ಸೇನೆಯನ್ನು ಕೊಂದು ಹಾಕಿದ್ದರಿಂದ ಹತಾಶರಾಗಿ ಮೇಜರ್ ಐಲ್ ಎಂಬುವನೊಂದಿಗೆ ಕಳುಹಿಸಿದ ದೊಡ್ಡ ಸೈನ್ಯದೊಂದಿಗೆ ಕುನ್ವರ್ ಸಿಂಹರ ಅತ್ಯಂತ ಚಿಕ್ಕ ಪಡೆ ಹೋರಾಡಲು ಅಸಮರ್ಥರಾಗಿ ಹಿಂದಿರುಗುತ್ತಾರೆ.

ಕೆಲ ಕಾಲದ ನಂತರ ಅಲ್ಲಿನ ಅಲ್ಲಿನ ಸ್ಥಳೀಯ ಜಮೀನ್ದಾರರ ಬೆಂಬಲದ ಜೊತೆಗೆ ವಾರಣಾಸಿ ಮತ್ತು ಗಾಜಿಪುರದ ಸೈನ್ಯದ ನೆರವು ಪಡೆದು ತಮ್ಮ ನೆಚ್ಚಿನ ಹೋರಾಟಗಾರರಲ್ಲಿ ಸ್ಫೂರ್ತಿಯನ್ನು ತುಂಬಿ ಕೆಲವೇ ಕೆಲವು ದಿನಗಳಲ್ಲಿ ಬ್ರಿಟಿಷ್ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸುತ್ತಾರೆ. ಈ ಸೋಲಿನಿಂದ ಅವಮಾನಿತನಾದ ಗವರ್ನರ್ ಜನರಲ್ ಲಾರ್ಡ್ ಕ್ಯಾನಿಂಗ್, ಲಾರ್ಡ್ ಕೆಡ್ ನಾಯಕತ್ವದಲ್ಲಿ ಕಳುಹಿಸಿದ ಮತ್ತೊಂದು ದೊಡ್ಡ ಸೈನ್ಯವನ್ನೂ ಸಹಾ ತನ್ನ ಚಾಣಕ್ಷ ಯುದ್ಧತಂತ್ರಗಳಿಂದ ಕುನ್ವರ್ ಸಿಂಗ್ ಸೋಲಿಸಿದಾಗ ಬ್ರಿಟಿಷ್ ಅಧಿಕಾರಿಗಳು ಅಕ್ಷರಶಃ ಹೈರಾಣಾಗುತ್ತಾರೆ. ಮರಳಿ ಯತ್ನವ ಮಾಡು ಎಂಬಂತೆ ಲುಗಾರ್ಡ್ ನಾಯಕತ್ವದಲ್ಲಿ ಅತಿ ದೊಡ್ಡ ಬ್ರಿಟಿಷ್ ಸೈನ್ಯ ಆಕ್ರಮಣಕ್ಕೆ ಸಿದ್ಧವಾಗುತ್ತಿದ್ದದ್ದನ್ನು ತಿಳಿದ ಕುನ್ವರ್ ಸಿಂಹ ಗೆರಿಲ್ಲಾ ಯುದ್ಧ ತಂತ್ರಗಾರಿಕೆಯಂತೆ, ಚಾಣಕ್ಷತನದಿಂದ ಅವರ



ಸೈನ್ಯದ ಗಮನವನ್ನು ಬೇರೆ ಕಡೆಗೆ ಚದುರಿಸಿ, ಆ ಪ್ರದೇಶದಲ್ಲಿ ಯುದ್ಧವನ್ನು ಎದುರಿಸಲು ಕುನ್ವರ್ ಸಿಂಗ್ ಸೈನ್ಯವೇ ಇರದಿದ್ದದ್ದನ್ನು ಕಂಡು ಹೆದರಿ ಓಡಿ ಹೋಗಿರಬಹುದೆಂದು ಭಾವಿಸಿ ಯುದ್ಧವನ್ನು ಗೆದ್ದವರಂತೆ ಸಂಭ್ರಮಿಸುತ್ತಿದ್ದಾಗ ಏಕಾಏಕಿ ಅವರ ಮೇಲೆ ದಾಳಿ ಮಾಡಿ, ಅಂತಹ ದೊಡ್ಡ ಸೈನ್ಯವನ್ನು ಸುಲಭವಾಗಿ ಸೋಲಿಸಿ ಬಿಡುತ್ತಾರೆ. ಕುನ್ವರ್ ಸಿಂಹನನ್ನು ಮತ್ತು ಅವನ ಸಹೋದರ ಅಮರ್ ಸಿಂಗನನ್ನು ಜೀವಂತವಾಗಲೀ ಅಥವಾ ಮರಣೋತ್ತರವಾಗಲೀ ಹಿಡಿದು ಕೊಟ್ಟವರಿಗೆ ತಲಾ 25,000 ರೂ. ಮತ್ತು 5,000 ರೂ. ಗಳ ಬಹುಮಾನವನ್ನು ಕೊಡುತ್ತೇವೆ ಎಂದು ಅಂದಿನ ಬ್ರಿಟಿಷ್ ಸರ್ಕಾರವೇ ಘೋಷಿಸಿತ್ತು ಎಂದರೆ ಕನ್ವರ್ ಸಿಂಗ್ ಅವರ ತಂಡ ಬ್ರಿಟೀಷರಿಗೆ ಯಾವ ಪರಿಯಲ್ಲಿ ಕಾಟ ಕೊಟ್ಟಿತ್ತು ಎಂಬುದನ್ನು ಊಹಿಸಿಕೊಳ್ಳಬಹುದಾಗಿದೆ.

ಅದೊಮ್ಮೆ ಕುನ್ವರ್ ಸಿಂಗ್ ಜಗದೀಶಪುರ ತಲಪಲು ಗಂಗಾ ನದಿಯನ್ನು ದಾಟುತ್ತಿದ್ದಾಗ ಬ್ರಿಟಿಷರ ಸೈನಿಕನೊಬ್ಬ ಹಾರಿಸಿದ ಗುಂಡು ಅವರ ಮಣಿಕಟ್ಟಿಗೆ ಬಡಿಯಿತು. ಅದಾಗಲೇ 80 ವರ್ಷ ವಯೋಮಾನದವರಾಗಿದ್ದ ಕುನ್ವರ್ ತನ್ನ ಕೈ ಎತ್ತಲೂ ಅಸಾಧ್ಯವಾದಾಗ, ಅದರಿಂದ ತನ್ನ ಆರೋಗ್ಯಕ್ಕೆ ಮತ್ತಷ್ಟು ಹಾನಿಯಾಗದಂತೆ ತಡೆಯುವ ಸಲುವಾಗಿ ತಂತಾನೇ ತನ್ನ ಕೈಯನ್ನು ಕತ್ತರಿಸಿಕೊಂಡಿದ್ದಂತಹ ಪರಮ ವೀರರಾಗಿದ್ದರು. ಮಾರ್ಚ್ 1858ರಲ್ಲಿ, ಈಗಿನ ಉತ್ತರ ಪ್ರದೇಶಕ್ಕೆ ಸೇರಿದ ಅಜಂಗಢವನ್ನು ಒಂದೇ ಕೈಯ್ಯಲ್ಲಿ ಹೋರಾಟ ಮಾಡಿ ವಶಪಡಿಸಿಕೊಂಡದ್ದಲ್ಲದೇ, 22 ಮತ್ತು 23 ಏಪ್ರಿಲ್ ರಂದು ಜಗದೀಶ್‌ಪುರದ ಬಳಿ ಕ್ಯಾಪ್ಟನ್ ಲೆ.ಗ್ರ್ಯಾಂಡ್ ನೇತೃತ್ವದ ಬ್ರಿಟಿಷ್ ಸೈನ್ಯದ ವಿರುದ್ಧ ನಡೆದ ಯುದ್ಧದಲ್ಲಿ ಕ್ಯಾಪ್ಟನ್ ಲೆ.ಗ್ರ್ಯಾಂಡ್ ಸೇರಿದಂತೆ ಸುಮಾರು 130 ಜನರನ್ನು ಕೊಂದು ಯುದ್ಧವನ್ನು ಗೆದ್ದರೂ ಸಹಾ ಆ ಹೋರಾಟದಲ್ಲಿ 80 ವರ್ಷದ ಕುನ್ವರ್ ಸಿಂಗ್ ತೀವ್ರವಾಗಿ ಗಾಯಗೊಂಡರೂ ಜಗದೀಶ್ ಪುರ ಕೋಟೆಯ ಮೇಲೆ ಹಾರುತ್ತಿದ್ದ ಯೂನಿಯನ್ ಜ್ಯಾಕ್ ಧ್ವಜವನ್ನು ಕೆಳಕ್ಕೆ ಇಳಿಸಿ ತಮ್ಮ ಧ್ವಜವನ್ನು ಹಾರಿಸಿ, 1858ರ ಏಪ್ರಿಲ್ 23 ರಂದು ತಮ್ಮ ಅರಮನೆಗೆ ಮರಳಿ ವಿಜಯೋತ್ಸವವನ್ನು ಆಚರಿಸಿದರು. ತಾನೊಂದು ಬಗೆದರೆ ದೈವವೊಂದು ಬಗೆದೀತು ಎನ್ನುವಂತೆ ಈ ಉತ್ಸಾಹ ಕೇವಲ ಮೂರು ದಿನಗಳ ಕಾಲವಿದ್ದು 26 ಏಪ್ರಿಲ್ 1858 ರಂದು ಕುನ್ವರ್ ಸಿಂಗ್ ಅವರ ದೇಹಾಂತ್ಯವಾಗುತ್ತದೆ. ಸಹೋದರನ ಸಾವಿನಿಂದ ವಿಚಲಿತರಾಗದೆ ಅವರ ಉತ್ತರಾಧಿಕಾರಿಯಾಗಿ ಸೈನ್ಯದ ನೇತೃತ್ವವನ್ನು ವಹಿಸಿಕೊಂಡ ಅವರ ಸೋದರ ಅಮರಸಿಂಗ್ ಬ್ರಿಟಿಷ್ ವಿರುದ್ಧ ಹೋರಾಟ ಮುಂದುವರಿಸುತ್ತಲೇ ಹೋಗುತ್ತಾರೆ.




## ಪುಸ್ತಕ ಪರಿಚಯ

### ಪಾರ್ಟಿಷನ್ಡ್ ಫ್ರೀಡಂ

ಲೇಖಕರು: **ರಾಮ್ ಮಾಧವ್**
ಪ್ರಕಾಶಕರು: **ಪ್ರಭಾತ್ ಪ್ರಕಾಶನ**

1947ರ ಆಗಸ್ಟ್ 15ರ ಮಧ್ಯ ರಾತ್ರಿ ಭಾರತ ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಅದೇ ಸಮಯಕ್ಕೆ ವಿಭಜನೆಯ ದುರಂತವೂ ನಡೆದು ಪಾಕಿಸ್ತಾನ ಹುಟ್ಟಿಕೊಂಡಿತು. ಆದರೆ ಈ ಘಟನೆ ನಡೆಯುವುದು ಯಾರಿಗೂ ಬೇಡವಾಗಿತ್ತು. ಆದರೆ ನಡೆದೇಹೋಯಿತು. ಅದಕ್ಕಿಂತಲೂ ನಾಲ್ಕು ದಶಕಗಳ ಮೊದಲು 1905ರಲ್ಲಿ ಬಂಗಾಲವನ್ನು ವಿಭಜಿಸಲು ಬ್ರಿಟಿಷ್ ಸರಕಾರ ಮುಂದಾಗಿತ್ತು. ಇಡಿಯ ಭಾರತ ಅತ್ಯಂತ ದೊಡ್ಡದಾದ 'ವಂದೇ ಮಾತರಂ' ಆಂದೋಲನದ ಮೂಲಕ ಆ ವಿಭಜನೆಯನ್ನು ವಿರೋಧಿಸಿತು.

ಕೊನೆಗೆ ಬ್ರಿಟಿಷ್ ಸರಕಾರ ಅದನ್ನು 1911ರಲ್ಲಿ ಹಿಂಪಡೆಯಬೇಕಾಯಿತು. ದೇಶ ಒಂದೊಮ್ಮೆ ಬ್ರಿಟೀಷರ ವಿಭಜನೆಯ ವಿರುದ್ಧ ಹೋರಾಡಿ ಗೆದ್ದಿತ್ತು. ಆನಂತರ ನಾಲ್ಕು ದಶಕಗಳ ನಂತರ ಇಡಿಯ ಭಾರತವೇ ವಿಭಜನೆಗೊಂಡರೂ ವಿರೋಧಿಸಲು ವಿಫಲಗೊಂಡಿದ್ದು ಯಾಕೆ? ಈ ದುರಂತಕ್ಕೆ ಕಾರಣವಾದ ಘಟನೆಗಳ್ಯಾವುವು? ಈ ದುರಂತಕ್ಕೆ ಯಾರು ಹೊಣೆ? ಪಾರ್ಟಿಷನ್ಡ್ ಫ್ರೀಡಂ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನ ಮಾಡಿದೆ.

## ಎಲ್ಲೋ ಕೇಳಿದ ಕಥೆ

### ತಪ್ಪು ಉತ್ತರ



ಕಾಡಿನ ಒಂದು ಮರದ ಮೇಲೆ ಒಂದು ಕೋಗಿಲೆ ವಾಸವಾಗಿತ್ತು. ಅದೇ ಮರದ ಮೇಲೆ ಬೇರೆ ಕೆಲವು ಪಕ್ಷಿಗಳು ವಾಸವಾಗಿದ್ದವು, ಕೋಗಿಲೆಗೆ ಖುಷಿಯಾದಾಗ ಅದು ಹಾಡುತ್ತಿತ್ತು, ಇದರಿಂದ ಬೇರೆ ಪಕ್ಷಿಗಳಿಗೆ ಕಿರಿಕಿರಿಯಾಗುತ್ತಿತ್ತು. ಒಂದು ದಿನ ಎಲ್ಲ ಪಕ್ಷಿಗಳು ಸೇರಿ ಅದನ್ನು ಅಲ್ಲಿಂದ ಓಡಿಸಿದವು. ಅದು ಕಾಡಿನ ಹೊರಗೆ ಇರುವ ಒಂದು ಒಣಮರದ ಮೇಲೆ ಹೋಗಿ ಕುಳಿತುಕೊಂಡಿತು.

ಅಷ್ಟರಲ್ಲೇ ಮತ್ತೊಂದು ಕೋಗಿಲೆ ಅಲ್ಲಿಗೆ ಬಂತು. ತನ್ನ ಬಂಧುವೊಂದು ನಿರಾಶೆಯಿಂದ ಕುಳಿತಿರುವುದನ್ನು ಕಂಡು ಅದರ ನಿರಾಶೆಗೆ ಕಾರಣ ಏನೆಂದು ಕೇಳಿತು. ಅದಕ್ಕೆ ಮೊದಲನೆಯ ಕೋಗಿಲೆ "ನಾನು ಕಾಡಿನಲ್ಲಿರುವ ಒಂದು ಮರದ ಮೇಲೆ ವಾಸಿಸುತ್ತಿದ್ದೆ. ನನಗೆ ಖುಷಿಯಾದಾಗ ಹಾಡುತ್ತಿದ್ದೆ. ಒಂದು ದಿನ ಆ ಮರದ ಮೇಲೆ ವಾಸವಾಗಿದ್ದ ಬೇರೆ ಪಕ್ಷಿಗಳು 'ನೀನೇಕೆ ಹಾಡುವಿ?' ಎಂದು ಕೇಳಿದವು. ಅದಕ್ಕೆ ನಾನು ನನ್ನ ಸಂತೋಷಕ್ಕಾಗಿ ಹಾಡುತ್ತೇನೆ. ಹಾಡದೇ ನಾನು ಬದುಕಿರಲಾರೆ ಎಂದು ಹೇಳಿದೆ. ಆಗ ಎಲ್ಲ ಪಕ್ಷಿಗಳು ಸೇರಿ ನನ್ನನ್ನು ಅಲ್ಲಿಂದ ಓಡಿಸಿಬಿಟ್ಟವು" ಎಂದು ಹೇಳಿತ್ತು. ಆಗ ಎರಡನೆಯ ಕೋಗಿಲೆ ನೀನು ಅವಕ್ಕೆ ತಪ್ಪು ಉತ್ತರ ಕೊಟ್ಟಿರುವೆ.

ಅದಕ್ಕೆ ಹಾಗಾಗಿದೆ ನಿನ್ನ ಉತ್ತರದಿಂದ ಅವು ನೀನೊಬ್ಬ ಸ್ವಾರ್ಥಿ. ನಿನ್ನ ಮೇಲೆ ನಿನಗೆ ನಿಯತ್ರಣವಿಲ್ಲ ಎಂದು ತಿಳಿದುಬಿಟ್ಟಿವೆ. ನನಗೂ ಆ ಪಕ್ಷಿಗಳು ಅದೇ ಪ್ರಶ್ನೆಯನ್ನು ಕೇಳಿದ್ದವು. ಅದಕ್ಕೆ ನಾನು 'ನಾನು ನಿಮ್ಮನ್ನು ಖುಷಿಪಡಿಸುವದಕ್ಕಾಗಿ ಹಾಡುತ್ತೇನೆ' ಎಂದು ಹೇಳಿದ್ದೆ.

ಆದ್ದರಿಂದ ನಾನು ಈಗಲೂ ಅವುಗಳ ಜೊತೆಯಲ್ಲಿಯೇ ವಾಸಿಸುತ್ತಿದ್ದೇನೆ ಎಂದು ಹೇಳಿತು. ನಾವು ಆಡುವ ಮಾತು ತುಂಬ ಜಾಣ್ಮೆಯಿಂದ ಕೂಡಿರಬೇಕು.

ಆದ್ದರಿಂದಲೇ 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ' ಎಂದು ಹಿರಿಯರು ಹೇಳಿರುವುದು.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ

## ಗೋಧಿ ಸೇರಿದಂತೆ 6 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಿದ ಕೇಂದ್ರ



ಗೋಧಿ ಮತ್ತು ಬಾರ್ಲಿ ಸೇರಿದಂತೆ 2023–24ರ ಮಾರುಕಟ್ಟೆ ಋತುವಿನ ಎಲ್ಲಾ ರಬಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್ಪಿ) ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಪ್ರಕಟಿಸಿದ್ದಾರೆ. ಗೋಧಿ ಮತ್ತು ಬಾರ್ಲಿ ಬೆಳೆಗಳ ಕನಿಷ್ಠ ಬೆಂಬಲ ಬೆಲೆಯನ್ನು ಪ್ರತಿ ಕ್ವಿಂಟಲ್‌ಗೆ 110 ರೂ. ಹೆಚ್ಚಿಸಲಾಗಿದೆ. ಮಸೂರ್ ದಾಲ್‌ನ ಬೆಲೆಯನ್ನು ಪ್ರತಿ ಕ್ವಿಂಟಲ್‌ಗೆ 500 ರೂ.ಗಳಷ್ಟು ಹೆಚ್ಚಿಸಲಾಗಿದೆ.

ಸಾಸಿವೆ ಬೆಲೆ ಕ್ವಿಂಟಲ್‌ಗೆ 209 ರೂ. ಕುಸುಬೆ ಕ್ವಿಂಟಲ್‌ಗೆ 209 ರೂ. ಮತ್ತು ರವೆಗೆ 105 ರೂ. ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಲಾಗಿದೆ. ಕನಿಷ್ಠ ಬೆಂಬಲ ಬೆಲೆ ಅಥವಾ MSP ಎಂದರೆ ಬೆಲೆಯ ತೀವ್ರ ಕುಸಿತವನ್ನು ತಡೆಯಲು ಸರ್ಕಾರವು ರೈತರಿಂದ ಕೆಲವು ಬೆಳೆಗಳನ್ನು ಖರೀದಿಸಲು ನಿಗದಿಪಡಿಸುವ ದರವಾಗಿದೆ.

## ಮುಂದಿನ ತಿಂಗಳು ದೇಶದ ಮೊದಲ ವಾಟರ್ ಮೆಟ್ರೋ ಯೋಜನೆಗೆ ಚಾಲನೆ



ಮುಂದಿನ ತಿಂಗಳು ಕೊಚ್ಚಿಯಲ್ಲಿ ದೇಶದ ಮೊದಲ ವಾಟರ್ ಮೆಟ್ರೋ ಯೋಜನೆಗೆ ಚಾಲನೆ ದೊರೆಯುವ ಸಾಧ್ಯತೆ ಇದೆ. ಕೊಚ್ಚಿನ್ ಶಿಪ್ಯಾರ್ಡ್ ಲಿಮಿಟೆಡ್ (CSL) ಕೊಚ್ಚಿ ಮೆಟ್ರೋ ರೈಲ್ ಲಿಮಿಟೆಡ್ (KMRL) ಗಾಗಿ ನಿರ್ಮಿಸಿದ ಐದನೇ ವಾಟರ್ ಮೆಟ್ರೋ ಬೋಟ್ ಅನ್ನು ಅಕ್ಟೋಬರ್ 15ರಂದು ಹಸ್ತಾಂತರ ಮಾಡಲಾಗಿದೆ. ಜಲ ಮೆಟ್ರೋ ಯೋಜನೆಗಾಗಿ 100 ಪ್ರಯಾಣಿಕರ ಸಾಮರ್ಥ್ಯದ ಒಟ್ಟು 23 ವಿದ್ಯುತ್ ಚಾಲಿತ ವೇಗದ ಹೈಬ್ರಿಡ್ ದೋಣಿಗಳನ್ನು CSL ನಿರ್ಮಿಸುತ್ತಿದೆ.

747 ಕೋಟಿ ರೂ.ಗಳ ವಾಟರ್ ಮೆಟ್ರೋ ಯೋಜನೆಗೆ 15 ಮಾರ್ಗಗಳನ್ನು ಗುರುತಿಸಲಾಗಿದ್ದು, 76 ಕಿಮೀ ವ್ಯಾಪ್ತಿಯ 10 ದ್ವೀಪಗಳನ್ನು ಸಂಪರ್ಕಿಸಲಾಗಿದೆ. ಎಲ್ಲವೂ ಯೋಜಿಸಿದಂತೆ ನಡೆದರೆ, ಬಹುಶಃ ನವೆಂಬರ್ ಮೊದಲ ವಾರದಲ್ಲಿ ರಾಷ್ಟ್ರೀಯ ಮಟ್ಟದ ಅರ್ಬನ್ ಮೊಬಿಲಿಟಿ ಇಂಡಿಯಾ ಕಾನ್ಫರೆನ್ಸ್ ವೇಳೆ ಉದ್ಘಾಟಿಸಲಾಗುವುದು ಎಂದು ಮೂಲಗಳು ವರದಿ ಮಾಡಿವೆ.

ವಾಟರ್ ಮೆಟ್ರೋ ಯೋಜನೆಯು ಕೊಚ್ಚಿಯ ಜಲ ಸಾರಿಗೆ ವಲಯದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರಲಿದೆ ಎಂದು ನಿರೀಕ್ಷಿಸಲಾಗಿದೆ. ಡಿಸೆಂಬರ್ ವೇಳೆಗೆ 14 ವಾಟರ್ ಮೆಟ್ರೋ ಟರ್ಮಿನಲ್‌ಗಳು ಕಾರ್ಯಾರಂಭ ಮಾಡಲು ಯೋಜಿಸಲಾಗಿದೆ.

## ದೀಪಾವಳಿ ಆಚರಿಸಿದ ಯುಕೆ ಸಂಸತ್ತು



ಯುಕೆ ಸಂಸತ್ತಿನ ಸಂಕೀರ್ಣದಲ್ಲಿ ಸೋಮವಾರ ಸಂಜೆ ದೀಪಾವಳಿ ಆಚರಣೆ ಮಾಡಲಾಗಿದೆ. ಹರೇ ಕೃಷ್ಣ ದೇವಸ್ಥಾನದ ಅರ್ಚಕರ ಮಂತ್ರ ಪಠಣಗಳ ಮೂಲಕ ಶಾಂತಿಗಾಗಿ ಪ್ರಾರ್ಥನೆಯನ್ನು ಮಾಡುವ ಮತ್ತು ಮೇಣದಬತ್ತಿಗಳನ್ನು ಬೆಳಗಿಸುವ ಮೂಲಕ ದೀಪಾವಳಿ ಆಚರಿಸಲಾಗಿದೆ.

ವೆಸ್ಟ್ ಮಿನಿಸ್ಟರ್ ಅರಮನೆಯೊಳಗಿನ ಸ್ಪೀಕರ್ ಹೌಸ್‌ನ ಸ್ಟೇಟ್ ರೂಮ್‌ನಲ್ಲಿ ಆಚರಣೆಯನ್ನು ನಡೆಸಲಾಯಿತು ಎಂದು ಮೂಲಗಳು ತಿಳಿಸಿವೆ. ಇದು ಸಂಸತ್ತಿನ ಸಂಕೀರ್ಣದಲ್ಲಿ ನಡೆದ ಇದುವರೆಗಿನ ಅತಿದೊಡ್ಡ ದೀಪಾವಳಿ ಕಾರ್ಯಕ್ರಮವನ್ನು ಎಂದು ಹೇಳಲಾಗಿದೆ.

## ಅಕ್ರಮವಾಗಿ ಪ್ರವೇಶಿಸಿದ ಪಾಕಿಸ್ತಾನ ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ಸೋಮವಾರ ತಡರಾತ್ರಿ ಅಂತಾರಾಷ್ಟ್ರೀಯ ಗಡಿಯಲ್ಲಿ ಪಾಕಿಸ್ತಾನದ ಕಡೆಯಿಂದ ಪಂಜಾಬ್‌ನ ಅಮೃತಸರ ಸೆಕ್ಟರ್‌ನಲ್ಲಿ ಭಾರತವನ್ನು ಪ್ರವೇಶಿಸಿದ ಡ್ರೋನ್ ಅನ್ನು ಗಡಿ ಭದ್ರತಾ ಪಡೆಗಳು ಹೊಡೆದುರುಳಿಸಿದವು. ಅಮೃತಸರದ ಥಾನಾ ಗ್ರಾಮದ ಬಳಿ ರಾತ್ರಿ 8.30ಕ್ಕೆ ಡ್ರೋನ್ ಅನ್ನು ಗಸ್ತು ಕರ್ತವ್ಯದಲ್ಲಿದ್ದ ಬಿಎಸ್‌ಎಫ್



ಪಡೆಗಳು ಗುರುತಿಸಿದವು ಮತ್ತು ತಕ್ಷಣ ಗುಂಡು ಹಾರಿಸಿ ಅದನ್ನು ಹೊಡೆದುರುಳಿಸಿದರು ಎಂದು ಹಿರಿಯ ಬಿಎಸ್‌ಎಫ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಬಿಎಸ್‌ಎಫ್ ಅಧಿಕಾರಿಗಳ ಪ್ರಕಾರ, ಡ್ರೋನ್ನೊಂದಿಗೆ 2.5 ಕೆಜಿಯ ಎರಡು ಪ್ಯಾಕೆಟ್ ನಿಷಿದ್ಧ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ.

ಪಾಕಿಸ್ತಾನದ ಕಡೆಯಿಂದ ಇಂತಹ ಅಕ್ರಮ ಯತ್ನಗಳನ್ನು ನಿರ್ವಹಿಸಲು ಭಾರತ–ಪಾಕಿಸ್ತಾನ ಗಡಿಯಲ್ಲಿ ನಿಯೋಜಿಸಲಾದ ಭದ್ರತಾ ಪಡೆಗಳ ಇನ್ಪುಟ್ ಅನ್ನು ಕೇಂದ್ರ ಸರ್ಕಾರ ಇತ್ತೀಚೆಗೆ ಹಂಚಿಕೊಂಡಿದೆ. ಇದುವರೆಗೆ ಪಾಕಿಸ್ತಾನದ 191 ಡ್ರೋನ್‌ಗಳು ಭಾರತಕ್ಕೆ ಪ್ರವೇಶಿಸಿವೆ. ಇದರಲ್ಲಿ 171 ಪಂಜಾಬ್ ಸೆಕ್ಟರ್‌ನ ಉದ್ದಕ್ಕೂ ಭಾರತ–ಪಾಕಿಸ್ತಾನ ಗಡಿಯ ಮೂಲಕ ಭಾರತದ ಭೂಪ್ರದೇಶವನ್ನು ಪ್ರವೇಶಿಸಿವೆ ಮತ್ತು 20 ಜಮ್ಮು ಸೆಕ್ಟರ್‌ನಲ್ಲಿ ಕಂಡುಬಂದಿದೆ ಎಂದು ವರದಿಗಳು ತಿಳಿಸಿವೆ

ಈ ವರ್ಷ ಜನವರಿ 1 ರಿಂದ ಸೆಪ್ಟೆಂಬರ್ 15ರ ನಡುವೆ ಹೊಡೆದುರುಳಿಸಿದ ಏಳು ಡ್ರೋನ್‌ಗಳು ಪಂಜಾಬ್‌ನ ಅಮೃತಸರ, ಫಿರೋಜ್‌ಪುರ ಮತ್ತು ಅಬೋಹರ್ ಪ್ರದೇಶಗಳಲ್ಲಿ ಕಂಡು ಬಂದಿವೆ.

## ಹಿಜಾಬ್ ಧರಿಸದೆ ಕ್ರೀಡಾಕೂಟದಲ್ಲಿ ಆಡಿದ ಇರಾನಿ ಮಹಿಳೆಗೆ ಅಭೂತಪೂರ್ವ ಸ್ವಾಗತ

ಹಿಜಾಬ್ ಇಲ್ಲದೆ ವಿದೇಶದಲ್ಲಿ ನಡೆದ ಕ್ರೀಡಾಕೂಟದಲ್ಲಿ ಭಾಗವಹಿಸುವ ಮೂಲಕ ಸಂಚಲನ ಮೂಡಿಸಿದ್ದ ಇರಾನ್ ಪರ್ವತಾರೋಹಿಯೊಬ್ಬರು ಬುಧವಾರ ಟೆಹ್ರಾನ್‌ಗೆ ಹಿಂದಿರುಗಿದ



ನಂತರ ವೀರೋಚಿತ ಸ್ವಾಗತವನ್ನು ಪಡೆದುಕೊಂಡಿದ್ದಾರೆ.

ಒಂದು ತಿಂಗಳಿನಿಂದ ಮಹ್ಸಾ ಅಮಿನಿ ಎಂಬುವವರ ಸಾವಿನಿಂದ ಭುಗಿಲೆದ್ದ ಹಿಜಾಬ್ ವಿರೋಧಿ ಪ್ರತಿಭಟನೆಗಳು ಇರಾನ್ ಅನ್ನು ತಲ್ಲಣಗೊಳಿಸಿದ್ದವು. ಇಲ್ಲಿನ ಮಹಿಳೆಯರು ಹಿಜಾಬ್ ಕಿತ್ತೊಗೆದು ಮತ್ತು ತಲೆ ಕೂದಲು ಕತ್ತರಿಸಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ನಡುವೆಯೇ ಎಲ್ನಾಜ್ ರೆಕಾಬಿ ದಕ್ಷಿಣ ಕೊರಿಯಾದಲ್ಲಿ ನಡೆದ ಸ್ಪರ್ಧೆಯ ನಂತರ ಟೆಹ್ರಾನ್ ವಿಮಾನ ನಿಲ್ದಾಣಕ್ಕೆ ಹಿಂತಿರುಗಿದ್ದಾರೆ. ಹಿಜಾಬ್ ಧರಿಸದೆ ಸ್ಪರ್ಧೆಯಲ್ಲಿ ಭಾಗಿಯಾದ ಇವರಿಗೆ ಭರ್ಜರಿ ಸ್ವಾಗತ ದೊರೆತಿದೆ.

ಆದರೆ ಇವರು ಹಿಜಾಬ್ ಧರಿಸದೆ ಇರುವುದಕ್ಕೆ ಆಡಳಿತದ ಕ್ಷಮೆ ಕೇಳಿದ್ದಾರೆ. ಆದರೆ ಒತ್ತಡ ಮತ್ತು ಭಯದ ಕಾರಣದಿಂದ ಅವರು ಕ್ಷಮೆಯಾಚನೆ ಮಾಡಿದ್ದಾರೆ ಎಂದು ಪ್ರತಿಭಟನಾಕಾರರು ಹೇಳಿದ್ದಾರೆ. ಅಲ್ಲದೇ ಆಕೆ ನಮ್ಮ ಹೀರೋ ಎಂದು ಬಣ್ಣಿಸಿದ್ದಾರೆ

## 307 ಪುರಾತನ ವಸ್ತುಗಳನ್ನು ಭಾರತಕ್ಕೆ ಹಿಂದಿರುಗಿಸಿದ ಅಮೇರಿಕಾ

ಭಾರತದಿಂದ ಕಳ್ಳ ಸಾಗಣೆ ಮಾಡಿದ ಸುಮಾರು 307 ಪುರಾತನ ವಸ್ತುಗಳನ್ನು ಅಮೇರಿಕವು ಭಾರತಕ್ಕೆ ಹಿಂತಿರುಗಿಸಿದೆ. ಈ ವಸ್ತುಗಳ ಬೆಲೆ ಸುಮಾರು 4 ಮಿಲಿಯನ್ ಡಾಲರ್ ಅಂದರೆ 33



ಕೋಟಿ ರೂಪಾಯಿಗಳು ಎಂದು ಅಂದಾಜಿಸಲಾಗಿದೆ. ಸುಧೀರ್ಘ 15 ವರ್ಷಗಳ ತನಿಖೆಯಲ್ಲಿ ಈ ವಸ್ತುಗಳನ್ನು ಪತ್ತೆ ಮಾಡಲಾಗಿದ್ದು, ವ್ಯಾಪಾರಿ ಸುಭಾಷ್ ಕಪೂರ್ ಎಂಬುವವರಿಂದ ಅತಿ ಹೆಚ್ಚು ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮ್ಯಾನ್‌ಹ್ಯಾಟನ್ ಡಿಸ್ಟ್ರಿಕ್ಟ್ ಅಟಾರ್ನಿ ಆಲ್ವಿನ್ ಬ್ರಾಗ್ ಅವರು ಸುಮಾರು USD 4 ಮಿಲಿಯನ್ ಮೌಲ್ಯದ 307 ಪ್ರಾಚೀನ ವಸ್ತುಗಳನ್ನು ಭಾರತದ ಜನರಿಗೆ ಹಿಂದಿರುಗಿಸುವುದಾಗಿ ಈ ಹಿಂದೆ ಘೋಷಿಸಿದ್ದರು. ಅದರ ನ್ಯೂಯಾರ್ಕ್‌ನಲ್ಲಿರುವ ಭಾರತೀಯ ಕಾನ್ಸುಲೇಟ್‌ನಲ್ಲಿ ಭಾರತದ ಕಾನ್ಸುಲ್ ಜನರಲ್ ರಣಧೀರ್ ಜೈಸ್ವಾಲ್ ಮತ್ತು ಯುಎಸ್ ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇನ್ವೆಸ್ಟಿಗೇಷನ್ಸ್ ಆಕ್ಟಿಂಗ್ ಡೆಪ್ಯುಟಿ ಸ್ಪೆಷಲ್ ಏಜೆಂಟ್–ಇನ್–ಚಾರ್ಜ್ ಕ್ರಿಸ್ಟೋಫರ್ ಲಾವ್ ಭಾಗವಹಿಸಿದ್ದ ವಾಪಸಾತಿ ಸಮಾರಂಭದಲ್ಲಿ ಎಲ್ಲಾ ಪ್ರಾಚೀನ ವಸ್ತುಗಳನ್ನು ಹಿಂತಿರುಗಿಸಲಾಗಿದೆ ಎಂದು ಮ್ಯಾನ್‌ಹ್ಯಾಟನ್ ಜಿಲ್ಲಾ ಅಟಾರ್ನಿ ಕಚೇರಿ ಹೊರಡಿಸಿದ ಹೇಳಿಕೆ ತಿಳಿಸಿದೆ.

ಇವುಗಳಲ್ಲಿ 235 ಪುರಾತನ ವಸ್ತುಗಳನ್ನು ಮ್ಯಾನ್‌ಹ್ಯಾಟನ್ ಜಿಲ್ಲಾ ಅಟಾರ್ನಿಯು ಸುಭಾಷ್ ಕಪೂರ್ ಅವರ ಕಛೇರಿಯಲ್ಲಿ ನಡೆಸಿದ ತನಿಖೆಯ ನಂತರ ವಶಪಡಿಸಿಕೊಂಡಿದೆ. ಈತ ಅಫ್ಘಾನಿಸ್ತಾನ, ಕಾಂಬೋಡಿಯಾ, ಭಾರತ, ಇಂಡೋನೇಷ್ಯಾ, ಮ್ಯಾನ್ಮಾರ್, ನೇಪಾಳ, ಪಾಕಿಸ್ತಾನ, ಶ್ರೀಲಂಕಾ, ಥೈಲ್ಯಾಂಡ್‌ಗಳಿಂದ ಅಪಾರ ಪ್ರಾಚೀನ ವಸ್ತುಗಳನ್ನು ಕಳ್ಳಸಾಗಣೆ ಮಾಡಿದ್ದಾನೆ ಎಂದು ಹೇಳಲಾಗಿದೆ.

## ಪಾಕಿಸ್ಥಾನ ವಿಶ್ವದ ಅತ್ಯಂತ ಅಪಾಯಕಾರಿ ರಾಷ್ಟ್ರ: ಜೋ ಬೈಡನ್



ಅಮೆರಿಕದ ಅಧ್ಯಕ್ಷ ಜೋ ಬೈಡನ್ ಪಾಕಿಸ್ತಾನದ ವಿರುದ್ಧ ಅತ್ಯಂತ ಪ್ರಾಮಾಣಿಕ ಹೇಳಿಕೆಯನ್ನು ನೀಡಿದ್ದಾರೆ. ಯಾವುದೇ ಸಮನ್ವಯ ಇಲ್ಲದೆ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರುವ ಪಾಕಿಸ್ತಾನವನ್ನು ವಿಶ್ವದ "ಅತ್ಯಂತ ಅಪಾಯಕಾರಿ ರಾಷ್ಟ್ರಗಳಲ್ಲಿ ಒಂದು" ಎಂದು ಬಣ್ಣಿಸಿದ್ದಾರೆ.

ಲಾಸ್ ಏಂಜಲೀಸ್ (ಕ್ಯಾಲಿಫೋರ್ನಿಯಾ) ನಲ್ಲಿ ನಡೆದ ಡೆಮಾಕ್ರಟಿಕ್ ಕಾಂಗ್ರೆಷನಲ್ ಕ್ಯಾಂಪೇನ್ ಕಮಿಟಿಯ ಸ್ವಾಗತ ಸಮಾರಂಭದಲ್ಲಿ ಯುಎಸ್ ಅಧ್ಯಕ್ಷರು ಈ ಟೀಕೆಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರು ಚೀನಾ ಮತ್ತು ರಷ್ಯಾ ಎರಡನ್ನೂ ಟೀಕಿಸಿದ್ದಾರೆ.

ಚೀನಾ ಮತ್ತು ವ್ಲಾಡಿಮಿರ್ ಪುಟಿನ್ ವಿಷಯದಲ್ಲಿ ರಷ್ಯಾಕ್ಕೆ ಸಂಬಂಧಿಸಿದಂತೆ ಯುಎಸ್ ವಿದೇಶಾಂಗ ನೀತಿಯ ಬಗ್ಗೆ ಬೈಡನ್ ಮಾತನಾಡುತ್ತಿದ್ದಾಗ ಪಾಕಿಸ್ತಾನದ ವಿರುದ್ಧ ಈ ಟೀಕೆಗಳನ್ನು ಮಾಡಲಾಗಿದೆ. ಬೈಡನ್ ಅವರು ಪಾಕಿಸ್ತಾನವನ್ನು ವಿಶ್ವದ ಅತ್ಯಂತ ಅಪಾಯಕಾರಿ ದೇಶವೆಂದು ಪರಿಗಣಿಸುವುದಾಗಿ ಹೇಳಿದ್ದಾರೆ. ಬೈಡನ್ ಅವರ ಹೇಳಿಕೆಗಳು ಯುಎಸ್ ಜೊತೆಗಿನ ಸಂಬಂಧಗಳನ್ನು ಸುಧಾರಿಸುವ ಶೆಹಬಾಜ್ ಷರೀಫ್ ಸರ್ಕಾರದ ಪ್ರಯತ್ನಕ್ಕೆ ಹಿನ್ನಡೆಯಾಗಿದೆ.

ಬುಧವಾರ, ಬೈಡನ್ ಆಡಳಿತವು ಕಾಂಗ್ರೆಸ್–ಆದೇಶದ ಪ್ರಮುಖ ನೀತಿ ದಾಖಲೆಯನ್ನು ಬಿಡುಗಡೆ ಮಾಡಿತು, ಚೀನಾ ಮತ್ತು ರಷ್ಯಾ ಎರಡೂ ಯುಎಸ್‌ಗೆ ಒಡ್ಡಿದ ಬೆದರಿಕೆಯನ್ನು ಅದು ಒತ್ತಿಹೇಳಿದೆ.

## ಎಲ್ಲಾ ಹೊಸ ರಾಷ್ಟ್ರೀಯ ಹೆದ್ದಾರಿಗಳು ಹೆಲಿಪ್ಯಾಡ್ ಹೊಂದಿರಲಿವೆ



ದೇಶದಲ್ಲಿ ನಿರ್ಮಾಣವಾಗಲಿರುವ ಎಲ್ಲಾ ಹೊಸ ರಾಷ್ಟ್ರೀಯ ಹೆದ್ದಾರಿಗಳು ತುರ್ತು ಸಂದರ್ಭಗಳಲ್ಲಿ ತಕ್ಷಣದ ಸ್ಥಳಾಂತರಕ್ಕಾಗಿ ಹೆಲಿಪ್ಯಾಡ್‌ಗಳನ್ನು ಹೊಂದಿರುತ್ತವೆ ಎಂದು ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ.

ನಾಗರಿಕ ವಿಮಾನಯಾನ ಸಚಿವರ ಸಮ್ಮೇಳನದಲ್ಲಿ ಮಾತನಾಡಿದ ಅವರು, "ನಾವು ರಸ್ತೆ ಸಾರಿಗೆ ಸಚಿವಾಲಯದೊಂದಿಗೆ ಮಾತುಕತೆ ನಡೆಸಿದ್ದೇವೆ, ಎಲ್ಲಾ ಹೊಸ ಹೆದ್ದಾರಿಗಳಲ್ಲಿ ಹೆಲಿಪ್ಯಾಡ್‌ಗಳನ್ನು ಹೊಂದಿರಬೇಕು ಇದರಿಂದ ಮೂಲಸೌಕರ್ಯಗಳು ಬೆಳೆಯುತ್ತವೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಹೆಲಿಪ್ಯಾಡ್‌ಗಳು ತುರ್ತು ಸಂದರ್ಭಗಳಲ್ಲಿ ತಕ್ಷಣ ಸ್ಥಳಾಂತರಿಸಲು ಸಹಾಯ ಮಾಡುತ್ತದೆ" ಎಂದಿದ್ದಾರೆ.

ನಾಗರಿಕ ವಿಮಾನಯಾನ ಸಚಿವರ ಸಮ್ಮೇಳನವನ್ನು ರಾಷ್ಟ್ರ ರಾಜಧಾನಿಯಲ್ಲಿ ಆಯೋಜಿಸಲಾಗಿದ್ದು, ನಾಗರಿಕ ವಿಮಾನಯಾನ ಸಚಿವಾಲಯದ ಪ್ರತಿನಿಧಿಗಳು ಸಹ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂದರ್ಭದಲ್ಲಿ ಸಿಂಧಿಯಾ ಅವರು ಪಶ್ಚಿಮ ಬಂಗಾಳ, ದೆಹಲಿ ಮತ್ತು ಪಂಜಾಬ್ ಸೇರಿದಂತೆ ಎಂಟು ರಾಜ್ಯಗಳಲ್ಲಿ ಶ್ರೇಣಿ–II, ಶ್ರೇಣಿ–III ನಗರಗಳಿಗೆ ವಾಯು ಸಂಪರ್ಕವನ್ನು ಸುಲಭಗೊಳಿಸಲು ಏರ್ ಟರ್ಬೈನ್ ಇಂಧನ (ATF) ಮೇಲಿನ ವ್ಯಾಟ್ ಅನ್ನು ಕಡಿಮೆ ಮಾಡುವಂತೆ ಒತ್ತಾಯಿಸಿದರು.

ಅಸ್ಸಾಂ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ದೆಹಲಿ, ತಮಿಳುನಾಡು, ರಾಜಸ್ಥಾನ, ಬಿಹಾರ ಮತ್ತು ಪಂಜಾಬ್ ಸರ್ಕಾರಗಳು ತಮ್ಮ ರಾಜ್ಯಗಳಲ್ಲಿ ನಾಗರಿಕ ವಿಮಾನಯಾನ ಕ್ಷೇತ್ರದ ಬೆಳವಣಿಗೆಗಾಗಿ ಎಟಿಎಫ್ ಮೇಲಿನ ವ್ಯಾಟ್ ಅನ್ನು ಕಡಿಮೆ ಮಾಡುವಂತೆ ಸಚಿವರು ಮನವಿ ಮಾಡಿದರು. ಎಟಿಎಫ್ ಮೇಲಿನ ವ್ಯಾಟ್ ಅನ್ನು ಕಡಿಮೆ ಮಾಡಿದರೆ ಈ ಎಂಟು ರಾಜ್ಯಗಳಲ್ಲಿ ವಿಮಾನ ಸಂಪರ್ಕವನ್ನು ಹೆಚ್ಚಿಸುವುದಾಗಿ ಸಿಂಧಿಯಾ ಭರವಸೆ ನೀಡಿದರು.

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th OCTOBER 2022
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-11-2022



## 1 ಲಕ್ಷಕ್ಕೂ ಅಧಿಕ ಅಲ್ಯೂಮಿನಿಯಂ ವ್ಯಾಗನ್ ಅಳವಡಿಸಲು ಯೋಜಿಸಿದೆ ರೈಲ್ವೆ



ಭಾರತೀಯ ರೈಲ್ವೇಯು ಮುಂಬರುವ ವರ್ಷಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಅಲ್ಯೂಮಿನಿಯಂ ವ್ಯಾಗನ್‌ಗಳನ್ನು ಅಳವಡಿಸಲು ಯೋಜಿಸಿದೆ. ಇದರಿಂದಾಗಿ ವಾರ್ಷಿಕ 25 ಲಕ್ಷ ಟನ್‌ಗಳಷ್ಟು ಇಂಗಾಲದ ಹೊರಸೂಸುವಿಕೆ ಕಡಿತವಾಗುವ ನಿರೀಕ್ಷೆ ಇದೆ. ಭಾನುವಾರ ಹೆಚ್ಚುವರಿ ಸಾಗಿಸುವ ಸಾಮರ್ಥ್ಯ ಹೊಂದಿದ ಭಾರತದ ಮೊದಲ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಅಲ್ಯೂಮಿನಿಯಂ ಸರಕು ಸಾಗಣೆ ರೇಕ್ ಅನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಫ್ಲ್ಯಾಗ್ ಆಫ್ ಮಾಡಿದರು.

ಇದನ್ನು ಸಂಪೂರ್ಣವಾಗಿವಾಗಿ ಸ್ಥಳೀಯ ವಿನ್ಯಾಸಗೊಳಿಸಲಾಗಿದೆ ಮತ್ತು RDSO, ಹಿಂಡಾಲ್ಕೊ ಮತ್ತು ಬೆಸ್ಕೊ ವ್ಯಾಗನ್ ಸಹಯೋಗದೊಂದಿಗೆ ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾಗಿದೆ. ರೇಕ್‌ಗಳು ಅಸ್ತಿತ್ವದಲ್ಲಿರುವ ಉಕ್ಕಿನ ರೇಕ್‌ಗಳಿಗಿಂತ 180 ಟನ್‌ಗಳಷ್ಟು ಹಗುರವಾಗಿರುತ್ತವೆ, 5–10 ಪ್ರತಿಶತದಷ್ಟು ಹೆಚ್ಚಿನ ಪೇಲೋಡ್ ಅನ್ನು ಸಾಗಿಸಬಲ್ಲವು ಮತ್ತು ಹಳಿಗಳ ಮೇಲೆ ಹರಿದುಹೋಗುವಾಗ ಕಡಿಮೆ ಶಕ್ತಿಯನ್ನು ಬಳಸುತ್ತವೆ.

"ಅಲ್ಯೂಮಿನಿಯಂ ಸರಕು ಸಾಗಣೆ ವ್ಯಾಗನ್ ಅನ್ನು ನಿರ್ದಿಷ್ಟವಾಗಿ ಕಲ್ಲಿದ್ದಲು ಸಾಗಿಸಲು ವಿನ್ಯಾಸಗೊಳಿಸಲಾಗಿದೆ, ಇದು ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲಿದೆ. ವ್ಯಾಗನ್ನ ಪ್ರತಿ 100 ಕೆಜಿ ತೂಕ ಕಡಿತದಿಂದ ಅದರ ಜೀವಿತಾವಧಿಯಲ್ಲಿ $CO_2$ ಉಳಿತಾಯ 8–10 ಟನ್‌ಗಳು. ಇದು ಒಂದು ರೇಕ್‌ಗೆ 14,500 ಟನ್‌ಗಳಿಗಿಂತ ಹೆಚ್ಚು $CO_2$ ಅನ್ನು ಉಳಿಸುತ್ತದೆ" ಎಂದು ಹಿಂಡಾಲ್ಕೊ ಹೇಳಿದೆ.

"ಮುಂಬರುವ ವರ್ಷಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವ್ಯಾಗನ್‌ಗಳನ್ನು ನಿಯೋಜಿಸಲು ರೈಲ್ವೇ ಯೋಜಿಸಿದೆ, ಇದರಿಂದ ಸಂಭಾವ್ಯ ವಾರ್ಷಿಕ $CO_2$ ಕಡಿತವು 25 ಲಕ್ಷ ಟನ್‌ಗಳಿಗಿಂತ ಹೆಚ್ಚು ಆಗಿರಬಹುದು" ಎಂದಿದೆ. ಹೈಸ್ಪೀಡ್ ಪ್ಯಾಸೆಂಜರ್ ರೈಲುಗಳಿಗಾಗಿ ಅಲ್ಯೂಮಿನಿಯಂ ಕೋಚ್ ಕೂಡ ಭಾಗವಹಿಸಲು ಹಿಂಡಾಲ್ಕೊ ಯೋಜಿಸುತ್ತಿದೆ. ಅಲ್ಯೂಮಿನಿಯಂ ರೈಲುಗಳು ಯುನೈಟೆಡ್ ಸ್ಟೇಟ್ಸ್, ಯುರೋಪ್ ಮತ್ತು ಜಪಾನ್‌ನಲ್ಲಿ ಹೆಚ್ಚಿನ ಬಳಕೆಯಲ್ಲಿವೆ.

## ಅಸ್ಸಾಂನಲ್ಲಿ ಉಗ್ರ ಸಂಘಟನೆಯ ಸಂಪರ್ಕ ಹೊಂದಿದ್ದ ನಾಲ್ವರ ಬಂಧನ

ಭಯೋತ್ಪಾದಕ ಸಂಘಟನೆಗಳೊಂದಿಗೆ ನಂಟು ಹೊಂದಿರುವ ಆರೋಪದ ಮೇಲೆ ಅಸ್ಸಾಂನಲ್ಲಿ ನಾಲ್ವರನ್ನು ಬಂಧಿಸಲಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

ಬಂಧಿತರಲ್ಲಿ ಇಬ್ಬರು ಬಾಂಗ್ಲಾದೇಶ ಮೂಲದ ಭಯೋತ್ಪಾದಕ ಸಂಘಟನೆ ಅನ್ಸರುಲ್ಲಾ ಬಾಂಗ್ಲಾ ತಂಡದ ಜೊತೆ ಸಂಪರ್ಕ ಹೊಂದಿದ್ದರು ಎಂದು ಅವರು ಹೇಳಿದ್ದಾರೆ.

"ನಾವು ಅಸ್ಸಾಂನಿಂದ ಜಿಹಾದಿ ಅಂಶಗಳನ್ನು ಬೇರುಸಹಿತ ಕಿತ್ತೊಗೆಯಲು ನಿರ್ಧರಿಸಿದ್ದೇವೆ. ತಮುಲ್ಪುರ್ ಪೊಲೀಸರು 2 ವ್ಯಕ್ತಿಗಳನ್ನು ಬಂಧಿಸುವಲ್ಲಿ ಶ್ಲಾಘನೀಯ ಕೆಲಸ ಮಾಡಿದೆ. ಬಂಧಿತ ಸಾದಿಕ್ ಅಲಿ ಮತ್ತು ಜಾಕಿಬುಲ್ ಅಲಿ ಬಾಂಗ್ಲಾ ಮೂಲದ ಭಯೋತ್ಪಾದಕ ಸಂಘಟನೆ ಅನ್ಸಾರುಲ್ಲಾ ಬಾಂಗ್ಲಾ ತಂಡಕ್ಕೆ ಸೇರಲು ಯುವಕರನ್ನು ಆಕರ್ಷಿಸುತ್ತಿದ್ದ" ಎಂದು ಅವರು ಟ್ವೀಟ್ ಮಾಡಿದ್ದಾರೆ.



ಕಳೆದ ಎರಡು ವರ್ಷಗಳಿಂದ ಯುವಕರನ್ನು ಉಗ್ರವಾದಿಗಳನ್ನಾಗಿ ಮಾಡುತ್ತಿರುವ ಸಾದಿಕ್ ಅಲಿ ಬಂಧನವು "ಮಹತ್ವದ ಸಾಧನೆ" ಎಂದು ಶರ್ಮಾ ಬಣ್ಣಿಸಿದ್ದಾರೆ. ಸಾದಿಕ್ ಜಮಾತ್-ಉಲ್-ಮುಜಾಹಿದೀನ್ ಬಾಂಗ್ಲಾದೇಶ (ಜೆಎಂಬಿ) ಗೂ ಸಂಪರ್ಕ ಹೊಂದಿದ್ದಾನೆ ಎಂದು ಅವರು ಹೇಳಿದ್ದಾರೆ.

ಇದೇ ಪ್ರಕರಣದಲ್ಲಿ ನಲ್ಬರಿ ಜಿಲ್ಲೆಯ ಘಾಗ್ರಾಪರ್ ಪೊಲೀಸರು ಇನ್ನೂ ಇಬ್ಬರು ವ್ಯಕ್ತಿಗಳಾದ ಹೆಬಲ್ ಅಲಿ ಮತ್ತು ಅಬು ರೈಹಾನ್ ಅವರನ್ನು ಬಂಧಿಸಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಈ ವರ್ಷ ರಾಜ್ಯದಲ್ಲಿ 40 ಜಿಹಾದಿಗಳನ್ನು ಬಂಧಿಸಲಾಗಿದೆ ಎಂದು ಶರ್ಮಾ ಸೆಪ್ಟೆಂಬರ್‌ನಲ್ಲಿ ವಿಧಾನಸಭೆಯಲ್ಲಿ ಹೇಳಿದ್ದರು. ಈ ವರ್ಷದ ಜನವರಿಯಿಂದ, ಬಾಂಗ್ಲಾದೇಶದ ನಿಷೇಧಿತ ಅನ್ಸಾರುಲ್ ಇಸ್ಲಾಮ್‌ಗೆ ಸಂಪರ್ಕ ಹೊಂದಿರುವ ಐದು ಮಾಡ್ಯೂಲ್‌ಗಳನ್ನು ಭೇದಿಸಲಾಗಿದೆ.

ಈ ವರ್ಷ ಅಸ್ಸಾಂನಲ್ಲಿ ನಾಲ್ಕು ಮದರಸಾಗಳನ್ನು ಸಹ ಕೆಡವಲಾಗಿದೆ. ಮೂರು ಮದರಸಾಗಳನ್ನು ಆಯಾ ಜಿಲ್ಲಾಡಳಿತವು "ಕಟ್ಟಡದ ನಿಯಮಗಳಿಗೆ ಬದ್ಧವಾಗಿಲ್ಲದ ಕಾರಣ" ಕೆಡವಿತ್ತು ಮತ್ತು ನಾಲ್ಕನೆಯದನ್ನು ಸ್ಥಳೀಯ ಜನರು ನೆಲಸಮಗೊಳಿಸಿದ್ದಾರೆ.

## ರಾಜ್ಯ ಸಾರಿಗೆ ನಿಗಮದ ಕಾರ್ಮಿಕರಿಗಾಗಿ 50 ಲಕ್ಷ ರೂಗಳ ಅಪಘಾತ ವಿಮಾ ಯೋಜನೆ




ರಾಜ್ಯ ಸಾರಿಗೆ ನಿಗಮವು ತನ್ನ ಸಂಸ್ಥೆಯ ಕಾರ್ಮಿಕರಿಗಾಗಿ 50 ಲಕ್ಷ ರೂಪಾಯಿಗಳ ಅಪಘಾತ ವಿಮಾ ಯೋಜನೆಯನ್ನು ಜಾರಿಗೊಳಿಸುವ ಐತಿಹಾಸಿಕ ನಿರ್ಧಾರ ತೆಗೆದುಕೊಂಡಿದೆ. ಈ ವಿಮಾ ಯೋಜನೆ ಸೌಲಭ್ಯದಿಂದ ಸಂಸ್ಥೆಯ ಕಾರ್ಮಿಕರ ಕುಟುಂಬಕ್ಕೆ ಆರ್ಥಿಕ ಭದ್ರತೆ ಸಿಗಲಿದೆ. ಈ ಹಿಂದೆ ಸಾರಿಗೆ ನಿಗಮದ ಸಿಬ್ಬಂದಿ ಅಪಘಾತದಲ್ಲಿ ಮೃತಪಟ್ಟರೆ ಅಥವಾ ಶಾಶ್ವತ/ಭಾಗಶಃ ಅಂಗವೈಕಲ್ಯತೆಗೆ ತುತ್ತಾದರೆ ಯಾವುದೇ ದೊಡ್ಡ ಮೊತ್ತದ ಪರಿಹಾರದ ಹಣ ಅವರ ಅವಲಂಬಿತರಿಗಾಗಲಿ ಅಥವಾ ಅವರಿಗಾಗಲಿ ಲಭಿಸುತ್ತಿರಲಿಲ್ಲ. ಆದರೆ ಹೊಸ ವಿಮಾ ಯೋಜನೆಯಿಂದ ದೊಡ್ಡ ಮೊತ್ತ ಅವಲಂಬಿತರಿಗೆ ಸಿಗಲಿದೆ.

ಹೊಸ ವಿಮಾ ಯೋಜನೆಯಿಂದ ಪಾಲಿಸಿದಾರರು ಅಪಘಾತದಲ್ಲಿ ಮೃತಪಟ್ಟಲ್ಲಿ ಅವರ ಅವಲಂಬಿತರಿಗೆ 50 ಲಕ್ಷ ರೂಪಾಯಿ ಸಿಗಲಿದೆ. ಅಪಘಾತದಲ್ಲಿ ಸಿಬ್ಬಂದಿ ಶಾಶ್ವತವಾಗಿ ಪೂರ್ಣ ಅಂಗವೈಕಲ್ಯಕ್ಕೆ ತುತ್ತಾದಲ್ಲಿ 20 ಲಕ್ಷ ರೂ. ಹಣ ಸಿಗಲಿದೆ ಹಾಗೂ ಶಾಶ್ವತ/ಭಾಗಶಃ ಅಂಗವೈಕಲ್ಯ ಉಂಟಾದಲ್ಲಿ 10 ಲಕ್ಷ ರೂ. ವಿಮಾ ಪರಿಹಾರ ದೊರೆಯಲಿದೆ.

ಸಿಬ್ಬಂದಿ ಅಪಘಾತದಲ್ಲಿನ ಪ್ಲಾಸ್ಟಿಕ್ ಸರ್ಜರಿ ಚಿಕಿತ್ಸೆಗಾಗಿ ಗರಿಷ್ಠ 10 ಲಕ್ಷ ರೂ. ಸಿಗಲಿದೆ. ಔಷಧಗಳ ಆಮದಿಗಾಗಿ ಗರಿಷ್ಠ 5 ಲಕ್ಷ ರೂ. ಸಿಗಲಿದೆ. ಕೋಮಾದಲ್ಲಿ ಮೃತಪಟ್ಟರೆ ಹೆಚ್ಚುವರಿಯಾಗಿ 2 ಲಕ್ಷ ರೂ. (ರೂ.50 ಲಕ್ಷ + ರೂ.2 ಲಕ್ಷ), ಏರ್ ಆಂಬುಲೆನ್ಸ್ ಸೇವೆಗೆ 10 ಲಕ್ಷ ರೂ. ವಿಮಾ ಪರಿಹಾರ ಸಿಗಲಿದೆ. ಸಾರಿಗೆ ಸಿಬ್ಬಂದಿ ಅಪಘಾತದಲ್ಲಿ ಮೃತಪಟ್ಟರೆ ಮಕ್ಕಳ ಪದವಿ ಶಿಕ್ಷಣಕ್ಕೆ ಗರಿಷ್ಠ 5 ಲಕ್ಷ ರೂ. ಹಾಗೂ ಹೆಣ್ಣು ಮಗಳ ವಿವಾಹಕ್ಕೆ ಗರಿಷ್ಠ 5 ಲಕ್ಷ ರೂ. ವರೆಗೆ ಆರ್ಥಿಕ ಸಹಾಯವನ್ನು ಈ ವಿಮಾ ಯೋಜನೆ ಒಳಗೊಂಡಿರುತ್ತದೆ.

## ಜಮ್ಮು-ಕಾಶ್ಮೀರಕ್ಕೆ 200 ಎಲೆಕ್ಟ್ರಿಕ್ ಬಸ್ ಪೂರೈಸಲಿದೆ ಟಾಟಾ ಮೋಟಾರ್ಸ್

ಭಾರತದ ಅತಿದೊಡ್ಡ ವಾಣಿಜ್ಯ ವಾಹನ ತಯಾರಕ ಟಾಟಾ ಮೋಟಾರ್ಸ್, ಜಮ್ಮು ಸ್ಮಾರ್ಟ್ ಸಿಟಿ ಲಿಮಿಟೆಡ್‌ನಿಂದ 200 ಎಲೆಕ್ಟ್ರಿಕ್ ಬಸ್‌ಗಳ ಟೆಂಡರ್ ಅನ್ನು ಪಡೆದುಕೊಂಡಿದೆ.

ಟಾಟಾ ಮೋಟಾರ್ಸ್ ಜಮ್ಮು ಮತ್ತು ಕಾಶ್ಮೀರದ ಅವಳಿ ರಾಜಧಾನಿ ನಗರಗಳಲ್ಲಿ ಅಂದರೆ ಜಮ್ಮು ಮತ್ತು ಶ್ರೀನಗರದಲ್ಲಿ ಎಲೆಕ್ಟ್ರಿಕ್ ಬಸ್‌ಗಳ ನಿಯೋಜನೆಗಾಗಿ ಕಾರ್ಯತಂತ್ರದ ಸಹಯೋಗವನ್ನು ಪ್ರವೇಶಿಸಿದೆ.

ಪರಿಸರ ಸ್ನೇಹಿ ಸಾರ್ವಜನಿಕ ಸಾರಿಗೆಗಾಗಿ ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಉಪಕ್ರಮದ ಭಾಗವಾಗಿ 9-ಮೀಟರ್‌ನ 150 ಯುನಿಟ್ ಮತ್ತು 12-ಮೀಟರ್ ಸ್ಟಾರ್‌ಬಸ್ ಎಲೆಕ್ಟ್ರಿಕ್ ಬಸ್‌ಗಳ 50 ಘಟಕಗಳನ್ನು ಸರಬರಾಜು ಮಾಡಲಾಗುತ್ತದೆ. ಒಪ್ಪಂದದ ಭಾಗವಾಗಿ,




ಟಾಟಾ ಮೋಟಾರ್ಸ್ 12 ವರ್ಷಗಳ ಅವಧಿಗೆ ಟಾಟಾ ಸ್ಟಾರ್‌ಬಸ್ ಎಲೆಕ್ಟ್ರಿಕ್ ಬಸ್‌ಗಳನ್ನು ಪೂರೈಸುತ್ತದೆ ಮತ್ತು ನಿರ್ವಹಿಸುತ್ತದೆ.

ಈಗಾಗಲೇ ಟಾಟಾ ಮೋಟಾರ್ಸ್ ತಯಾರಿಸಿದ 40 ಎಲೆಕ್ಟ್ರಿಕ್ ಬಸ್‌ಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಚರಿಸುತ್ತಿವೆ. 2019 ರಿಂದ, ಕಂಪನಿಯು ಭಾರತದ ಅನೇಕ ನಗರಗಳಿಗೆ ಸರಬರಾಜು ಮಾಡಿದ 715 ಎಲೆಕ್ಟ್ರಿಕ್ ಬಸ್‌ಗಳು ಒಟ್ಟಾರೆಯಾಗಿ 40 ಮಿಲಿಯನ್ ಕಿಲೋಮೀಟರ್‌ಗಳಿಗಿಂತ ಹೆಚ್ಚು ಕ್ರಮಿಸಿವೆ. ಪ್ರಸ್ತುತ, ಟಾಟಾ ಮೋಟಾರ್ಸ್ 3,800 ಕ್ಕೂ ಹೆಚ್ಚು ಎಲೆಕ್ಟ್ರಿಕ್ ಬಸ್‌ಗಳಿಗಾಗಿ ದೇಶದಾದ್ಯಂತದಿಂದ ಆರ್ಡರ್ ಪಡೆದುಕೊಂಡು ಬಂದಿದೆ.

ಕನ್ವರ್ಜೆನ್ಸ್ ಎನರ್ಜಿ ಸರ್ವಿಸಸ್ ಲಿಮಿಟೆಡ್ (CESL) ಮೂಲಕ ಟೆಂಡರ್‌ನ ಭಾಗವಾಗಿ, ಟಾಟಾ ಮೋಟಾರ್ಸ್ ಈಗಾಗಲೇ ದೆಹಲಿ ಸಾರಿಗೆ ನಿಗಮದಿಂದ (DTC) 1,500 ಎಲೆಕ್ಟ್ರಿಕ್ ಬಸ್‌ಗಳು, ಪಶ್ಚಿಮ ಬಂಗಾಳ ಸಾರಿಗೆ ಸಂಸ್ಥೆ (WBTC) ಯಿಂದ 1,180 ಎಲೆಕ್ಟ್ರಿಕ್ ಬಸ್‌ಗಳು ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (BMTC)ಯಿಂದ 921 ಎಲೆಕ್ಟ್ರಿಕ್ ಬಸ್‌ಗಳಿಗೆ ಆದೇಶಗಳನ್ನು ಸ್ವೀಕರಿಸಿದೆ.



ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.